ಚಕಿತರಾದೆವು. ಇತಿಹಾಸದ ಗರ್ಭದಲ್ಲಿ ಹುದುಗಿಹೋಗಿದ್ದ ಈ ಭವ್ಯ ಭವನ ನಿಧಾನವಾಗಿ ಮತ್ತೆ ಮೈದೋರುತ್ತಿರುವುದನ್ನು ಕಲ್ಪಿಸಿಕೊಂಡು ಪುಳಕಿತಗೊಂಡೆವು. ಇದೊಂದು ನಂಬಲಸಾಧ್ಯವಾದ ಕಥೆ. ನರೇಂದ್ರನ ಬಾಲ್ಯ ಲೀಲೆಗಳೆಲ್ಲ ಮತ್ತೊಮ್ಮೆ ಮನಃಪಟಲದಲ್ಲಿ ಹಾದುಹೋದವು. ಗತಕಾಲದ ದಿವ್ಯಸಾನ್ನಿಧ್ಯದಲ್ಲಿ ನಾವಿರುವಂತೆ ಭಾಸವಾಯಿತು. ನಿಜ, ಸ್ವಾಮಿ ವಿವೇಕಾನಂದರು ಈಗಲೂ ನಮ್ಮೊಂದಿಗಿರುವರು. ಅವರೇ ಹೀಗೆ ಹೇಳಲಿಲ್ಲವೇ : "ನನ್ನ ದೇಹದಿಂದ ಹೊರಗೆ ಹೋಗುವುದೇ, ಈ ದೇಹವನ್ನು ಜೀರ್ಣವಸನದಂತೆ ಬಿಸಾಕುವುದೇ ಒಳ್ಳೆಯದೆಂದು ನನಗನಿಸುತ್ತಿದೆ. ಆದರೆ ನಾನು ಕೆಲಸಕ್ಕೆ ತಿಲಾಂಜಲಿ ನೀಡುವುದಿಲ್ಲ. ತಾನು ದೇವರೊಂದಿಗೆ ಒಂದಾಗಿರುವುದನ್ನು ಜಗತ್ತು ಅರಿಯುವವರೆಗೂ ನಾನು ಎಲ್ಲೆಲ್ಲಿಯೂ ಜನರಿಗೆ ಸ್ಫೂರ್ತಿ ನೀಡುತ್ತಾ ಹೋಗುತ್ತೇನೆ."

ಸ್ವಾಮೀಜಿಯ ಜನ್ಮಸ್ಥಳವನ್ನು ಸುರಕ್ಷಿತವಾಗಿಡುವುದು ಬಹಳ ಹಿಂದೆಯೇ ಆಗಬೇಕಾದ ಕಾರ್ಯವಾಗಿತ್ತು. ಇನ್ನು ಒಂದೆರಡು ವರ್ಷಗಳಲ್ಲಿ ಈ ಕಾರ್ಯ ಸಮಾಪ್ತಿಗೊಳ್ಳುವುದು. ಆಗ ಅನೇಕಾನೇಕ ಜನರು ಇಲ್ಲಿಂದ ಸ್ಫೂರ್ತಿಯನ್ನು ಪಡೆಯುತ್ತಾರೆ. ಇದೊಂದು ಪಾವನ ಯಾತ್ರಾಸ್ಥಳವಾಗಿ ಜನರು ಆಧ್ಯಾತ್ಮಿಕ ಪುನರುಜ್ಜೀವನವನ್ನು ಪಡೆಯಲು, ಜನಸೇವೆಯ ಮಹಾಪ್ರೇರಣೆಯನ್ನು ಪಡೆಯಲು, ಆ ದಿವ್ಯಜೀವನದ ಪುಣ್ಯ ಸರೋವರದಲ್ಲಿ ಮಿಂದು ಪುನೀತರಾಗಲು ಇಲ್ಲಿಗೆ ತಂಡೋಪತಂಡವಾಗಿ ಬರುತ್ತಾರೆ. ಈ ಪುನರ್ನಿರ್ಮಾಣವು ಕಾಲಗರ್ಭದಲ್ಲಿ ಮುಚ್ಚಿಹೋಗಿದ್ದ ಒಂದು ಸ್ಫೂರ್ತಿಯ ಝರಿಯನ್ನು ಜಗತ್ತಿನ ಮುಂದೆ ತೆರೆದಿಡುತ್ತಿದೆ. ಇಡೀ ಜಗತ್ತು ಈ ಮಹತ್ಕಾರ್ಯವನ್ನು ಕೊಂಡಾಡುವುದರಲ್ಲಿ ಸಂದೇಹವಿಲ್ಲ. ☆

# ಪ್ರಹಸನ ಪ್ರಸಂಗ

ಒಂದು ಮೃಗಾಲಯ. ಅಲ್ಲಿ ಕೆಲವು ಕಾಂಗ್ರೂಗಳಿದ್ದವು. ಅವುಗಳ ಸುತ್ತ ಗೋಡೆ ಇತ್ತು. ಒಂದು ತುಂಟ ಕಾಂಗ್ರೂಮರಿ ಗೋಡೆಯ ಹೊರಗೆ ಬರುತ್ತಿತ್ತು. ಅದನ್ನು ತಡೆಯಲು ಗೋಡೆಯನ್ನು ೫ ಅಡಿ ಏರಿಸಲಾಯಿತು. ಆದರೂ ಆ ಮರಿ ಹೊರಗೆ ಬಂದು ಆಟ ಆಡುವುದು ನಿಲ್ಲಲಿಲ್ಲ. ಅಧಿಕಾರಿಗಳು ಗೋಡೆಯನ್ನು ಇನ್ನೂ ಏರಿಸಿದರು. ಕಾಂಗ್ರೂಮರಿ ಹೊರಗೆ ಬರುವುದು ನಿಲ್ಲಲಿಲ್ಲ. ಗೋಡೆಯ ಎತ್ತರ ಏರುತ್ತ ಹೋಗಿ ೫೦ ಅಡಿ ಮುಟ್ಟಿತು. ಆದರೆ ಕಾಂಗ್ರೂ ಮರಿ ಹೊರಗೆ ಬರುವುದಂತೂ ನಿಲ್ಲಲಿಲ್ಲ. ಈಗ ಒಳಗಡೆ ಇರುವ ಕಾಂಗ್ರೂಗಳು ಆಶ್ಚರ್ಯದಿಂದ ಗೋಡೆ ಏರುತ್ತಿರುವುದನ್ನು ನೋಡುತ್ತಿವೆ.

ಒಂದು ಕಾಂಗ್ರೂ : ಏನು, ಗೋಡೆ ಏರುತ್ತಲೇ ಇದೆಯಲ್ಲ?

ಇನ್ನೊಂದು ಕಾಂಗ್ರೂ : ಹೌದು, ಮೊದಲು ೫ ಅಡಿ ಇತ್ತು, ಈಗ ೫೦ ಅಡಿ ಆಗಿದೆ.

ಮತ್ತೊಂದು ಕಾಂಗ್ರೂ : ಏರಲಿ ಬಿಡು. ೧೦೦ ಅಡಿ ಏರಿದರೂ ಏನಂತೆ. ಅವರು ಬಾಗಿಲು ಹಾಕುವುದನ್ನು ಮರೆಯುವವರೆಗೂ ಯಾವ ತೊಂದರೆಯೂ ಇಲ್ಲ.

ನಾವು ಆಧ್ಯಾತ್ಮಿಕ ಜೀವನದಲ್ಲಿ ಸಾಧನೆಯ ಭದ್ರ ಕೋಟೆಯನ್ನು ಕಟ್ಟುತ್ತೇವೆ. ಆದರೆ ಆಸೆಗಳ ಬಾಗಿಲನ್ನು ಮುಚ್ಚುವುದೇ ಇಲ್ಲ. ಆ ಬಾಗಿಲುಗಳ ಮೂಲಕ ನಮ್ಮ ಮಾನಸಿಕ ಶಕ್ತಿಯೆಲ್ಲ ಹೊರಗೆ ಹೋಗುತ್ತಿರುತ್ತದೆ. ಆಸೆಗಳ ಬಾಗಿಲು ಮುಚ್ಚದೆ ಸಾಧನೆಯ ಗೋಡೆಯನ್ನು ಎಷ್ಟು ಏರಿಸಿದರೂ ಪ್ರಯೋಜನವಿಲ್ಲ.

❄ ❄ ❄ ❄

ಭಗವನ್ನಾಮವನ್ನು ಉಚ್ಚರಿಸುವುದು ನಮಗೆ ಒಂದು ಯಾಂತ್ರಿಕ ಕ್ರಿಯೆಯಾಗಿರುತ್ತದೆ, ಭಕ್ತಿಯ ಸಾಧನೆಯಾಗಿರುವುದಿಲ್ಲ. ಆದ್ದರಿಂದ ಎಷ್ಟೇ ನಾಮೋಚ್ಚಾರಣೆ ಮಾಡಿದರೂ ಆಂತರಿಕ ಪರಿವರ್ತನೆಯಾಗುವುದಿಲ್ಲ. ಅದು ನಮ್ಮ ವಿಷಮ ಪರಿಸ್ಥಿತಿಯಲ್ಲಿ ನಮಗೆ ಸಹಾಯಕ್ಕೆ ಬರುವುದಿಲ್ಲ, ಏಕೆಂದರೆ ಅದು ಅಂತರಂಗವನ್ನು ಪ್ರವೇಶಿಸಿರುವುದೇ ಇಲ್ಲ.

ಒಬ್ಬ ವ್ಯಾಪಾರಿ ಇದ್ದನು. ಅವನಿಗೆ ಅನೇಕ ಮಕ್ಕಳು. ಎಲ್ಲ ಮಕ್ಕಳಿಗೂ ದೇವರ ಹೆಸರುಗಳನ್ನೇ ಇಟ್ಟಿದ್ದ. ಅವರ ಹೆಸರು ಹಿಡಿದು ಕರೆಯುವ ಮೂಲಕವಾದರೂ ಭಗವನ್ನಾಮವನ್ನು ಉಚ್ಚರಿಸಿದಂತಾಗುತ್ತದೆ ಎಂಬುದು ಅವನ ಅನಿಸಿಕೆಯಾಗಿತ್ತು. ಅವನಿಗೆ ವಯಸ್ಸಾಯಿತು. ಇನ್ನೇನು ಸಾವು ಸಮೀಪಿಸುವ ಸ್ಥಿತಿಯಲ್ಲಿದ್ದಾನೆ. ಮಕ್ಕಳೆಲ್ಲರನ್ನು ಈಗ ಕರೆದರೆ ದೇವರನ್ನು ಕರೆದಂತಾಗುತ್ತದೆ, ಹಾಗೆ ಕರೆಯುತ್ತಲೇ ಪ್ರಾಣ ಬಿಡಬೇಕು ಎಂದು ಅವನು ಆಲೋಚಿಸಿದ. "ಕೃಷ್ಣ, ಶಿವ, ರಾಮ, ಗೋವಿಂದ, ನಾರಾಯಣ" ಎಂದು ಕರೆಯತೊಡಗಿದ. ಮಕ್ಕಳೆಲ್ಲರೂ ಮುದುಕಪ್ಪನು ಯಾವುದಾದರೂ ರಹಸ್ಯ ನಿಧಿಯ ವಿಚಾರವನ್ನು ಹೇಳಬಹುದೆಂದು, ಓಡೋಡಿ ಬಂದರು. ಅವರನ್ನೆಲ್ಲ ನೋಡಿ ವ್ಯಾಪಾರಿಯು ಸಂಕಟದಿಂದ "ಅಯ್ಯೊ, ನೀವೆಲ್ಲರೂ ಬಂದುಬಿಟ್ಟರೆ ಅಂಗಡಿಯನ್ನು ನೋಡಿಕೊಳ್ಳುವವರಾರು?" ಎಂದು ಉದ್ಗರಿಸುತ್ತಿದ್ದಂತೆಯೇ ಅವನ ಪ್ರಾಣಪಕ್ಷಿ ಹಾರಿಹೋಯಿತು.

❄ ❄ ❄ ❄

ಎಷ್ಟೋ ವೇಳೆ ನಮ್ಮನ್ನು ನಾವು ಪ್ರಶಂಸಿಸಿಕೊಳ್ಳಲು ಹೋಗಿ ಇತರರ ಲೇವಡಿಗೆ ಒಳಗಾಗುತ್ತೇವೆ. ಅನೇಕರು ಅತ್ಯಂತ ಉತ್ಪ್ರೇಕ್ಷೆಯಿಂದ ತಮ್ಮನ್ನು ಹೊಗಳಿಕೊಳ್ಳುತ್ತಾರೆ. ಇದು ಅವರ ಆಂತರಿಕ ಖಾಲಿತನವನ್ನು ಸೂಚಿಸುತ್ತದೆ.

ಅಮೆರಿಕದಲ್ಲಿ ರಾಜಕಾರಣಿಯೊಬ್ಬನು ಟೆಕ್ಸಾಸ್ ಪ್ರಾಂತಕ್ಕೆ ಭೇಟಿ ನೀಡಲು ಹೋದನು. ಟೆಕ್ಸಾಸ್ ವಿಸ್ತಾರವಾದ ಭೂಪ್ರದೇಶಕ್ಕೆ ಪ್ರಸಿದ್ಧಿ. ಒಬ್ಬೊಬ್ಬರು ರೈತರೂ ಸಾವಿರಾರು ಎಕರೆ ಭೂಮಿಯನ್ನು ಹೊಂದಿರುತ್ತಾರೆ. ರಾಜಕಾರಣಿಯು ಒಬ್ಬ ರೈತನನ್ನು ಭೇಟಿಯಾದನು. ವ್ಯವಸಾಯದ ಬಗ್ಗೆ ಮಾತನಾಡುತ್ತಿರುವಾಗ ರಾಜಕಾರಣಿಯು ಮಧ್ಯೆ ಹೇಳಿದನು : "ನಾನೂ ವಿಸ್ತಾರವಾದ ಹೊಲವನ್ನು ಹೊಂದಿದ್ದೇನೆ." ರೈತ : ಎಷ್ಟು ವಿಸ್ತಾರವಾಗಿದೆ?

ರಾಜಕಾರಣಿ : ಬೆಳಗ್ಗೆ ಕಾರಿನಲ್ಲಿ ಒಂದು ತುದಿಯಿಂದ ಹೊರಟರೆ ಇನ್ನೊಂದು ತುದಿಯನ್ನು ಮುಟ್ಟುವ ಹೊತ್ತಿಗೆ ಸೂರ್ಯ ಮುಳುಗಿರುತ್ತಾನೆ. ರೈತ : ಓಹ್, ಹಿಂದೆ ನನ್ನ ಹತ್ತಿರವೂ ಅಂಥದೇ ಒಂದು ಕಾರು ಇತ್ತು! ❊